ಸುಮಾರು ಮೂರು ತಾಸಾಗಿತ್ತು ನಜೀರ್‌ಸಾಬನ ಹೋಟೆಲ್ಲಿಗೆ ಬಂದು ಕುಂತು ಒಬ್ರೂ ಕೂಡ ಅಕ್ಕಪಕ್ಕ ಸುಳೀಲೇ ಇಲ್ಲ. ಆದ್ರೂ ಛಲ ಬಿಡದೆ ಪೆಂಡಾರಿಗಳ ಹಾಗೆ ಕದಲದೇ ಕುಂತ ಭರಮಪ್ಪ. ಕೊನೆಗೆ ಬೇಜಾರಾಗಿ ಒಂದು ದಮ್ಮು ಎಳೆದರಾಯ್ತೆಂದು ಬೀಡಿ ಹಚ್ಚಿ ರಾಜಸ್ಥಾನದ ಘರಾನೆವಾಲಾಗಳು ಎಳೆದಂತೆ ಜೋರಾಗಿ ಎಳೆದ. ಅವನ ಎಳೆತದ ರಭಸಕ್ಕೆ ಕಾಲುಭಾಗ ಬೀಡಿ ಸುಟ್ಟು ಹೋಯಿತು. ಮರಳುಗಾಡಿನಲ್ಲಿ ಓಯಸಿಸ್ ಉಕ್ಕಿದಂತೆ ವಿಚಾರವೊಂದು ಅವನ ತಲೆಗೆ ಸರ್‍ರನೆ ಬಂತು. ಮೊನ್ನೆಯಷ್ಟೇ ಕಸಬರಿಗೆ ಮಾರಿ ಹೆಂಡತಿ ಕೈಗೆ ತಂದು ಕೊಟ್ಟ ದುಡ್ಡಿನ ನೆನಪಾಯ್ತು. ತಕ್ಷಣವೇ ಎದ್ದು ಮನೆಗೆ ಹೊರಟ. ಮನೆಯಲ್ಲಿ ಬಸ್ವಿಗೆ ಜೀವನಾನೆ ಸಾಕಾಗಿ ಹೋಗಿತ್ತು. ಏನೋ ಮಕ್ಕಳದಾವು ಅವುನ್ನೋಡಿ ಬದುಕ್ಬೇಕು ಎಂಬ ಮನೋಭಾವನೆಯೊಂದಿಗೆ ಜೀವಿಸುತ್ತಿದ್ದಳು. ಐದು ವರ್ಷದ ಈರ, ಮೂರು ವರ್ಷದ ಮಲ್ಲಿ, ಒಂದು ವರ್ಷದ ರೂಪಿ, ಇವರುಗಳ ಬೇಕು-ಬೇಡಗಳನ್ನು ನೋಡಿಕೊಂಡು ಇದ್ದಳು. ಇದರ ಜೊತೆಗೆ ಅವಳಿಗೆ ಬುಟ್ಟಿ ಹೆಣೆಯುವುದು, ಕಸಬರಿಗೆ ಮಾಡುವುದು ದಿನಚರಿಯಾಗಿತ್ತು. ಆಕೆ ತುಂಬು ಬಸುರಿ ಬೇರೆ. ಮೂರು ಮಕ್ಳು ಅವ್ವನ ಮನ್ಯಾಗ ಹಡ್ದೀನಿ, ಇದೂ ಅಲ್ಲೇ ಅಂದ್ರೆ ಆಕಿ ಮನ್ಯಾಗ ದುಡ್ದು ಹಾಕರ್‍ಯ್ಯಾರು? ಆಕಿ ಗಂಡ್ಮಕ್ಳು ಒಂದೂ ನೋಡುವಲ್ವು, ಆಕಿದಾ ಆಕಿಗೆ. ನಂದೆಲ್ಲಿಂದ ನೋಡ್ತಾಳ ಅಂತ ಏನೇನೋ ಯೋಚ್ನೆ ಮಾಡ್ತಾ ಪುಟ್ಟಿ ಹೆಣೀತಾ ಕುಂತಿದ್ಲು. ಆಕಿ ಪಕ್ಕ ಈರ, ಈಚಲ ಗರಿಗಳನ್ನು ಸೀಳುತ್ತಾ... ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಇದೇ ರೀತಿ ಕಂಡು ಹಿಡಿತೀನಿ ಎನ್ನುವಷ್ಟು ಚುರುಕಾಗಿ ಅವುಗಳನ್ನು ತಿರುವುತ್ತಾ, ಕಸಬರಿಗೆ ಕಟ್ಟಲು ಹಗ್ಗ ಹೊಸೆಯುತ್ತಿದ್ದ. ಆಕಿ ಮುಂದೆ ರೂಪಿ, ಮಲ್ಲಿ ಸಗಣಿ ಗೊಂಬಿ ಕುಂತಂಗ ಕುಂತಿದ್ವು. ಭರಮಪ್ಪ ಆಕಿ ಮುಂದ ಬಂದು ಹಲ್ಲು ಕಿಸೀತಾ ಕುಂತ.



ಇವ್ನು ಹಲ್ಲು ಕಿಸಿಯೋದ್ನ ಕಂಡು ಮನ್ನೆ ಮುರಾಸಂಜೆಗೆ ರೊಕ್ಕ ಕೊಟ್ಟಿದ್ದ ಅದಕ್ಕ ಗೇಣ ಹಾಕಾಕ ಬಂದಾನ ಅನ್ಕಂಡು ಸೂರ್ಯಕಾಂತಿ ಹೂವಿನ ಆಕಾರ